ಪ್ರಶ್ನೆಗಳ ಪೈಕಿ 108 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ 06.12.2012ರ 2ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 78 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–1) (ಭಾಗ–11)

6. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2012–13ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯಮಾವಧಿ ಪರಿಶೀಲನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

7. ವರದಿಯನ್ನೊಪಿಸುವುದು

ಶ್ರೀ ಎನ್. ಯೋಗಿಶ್ ಭಟ್. (ಉಪ ಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಅರ್ಜಿಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಭೆಯ 2011–12ನೇ ಸಾಲಿನ ಅರ್ಜಿಗಳ ಸಮಿತಿಯು ತಯಾರಿಸಿದ 16ನೇ ವರದಿಯನ್ನು ಈ ಅಧಿವೇಶದಲ್ಲಿ ಸಮಿತಿಯ ಪರವಾಗಿ ನಾನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ : ಹೊಸದುರ್ಗ ನಗರದಲ್ಲಿ ಡಿಪ್ಲೊಮಾ ಕಾಲೇಜಿಗೆ ಸರ್ಕಾರಿ ಜಾಗ ಕೊಡುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ಹೊಸದುರ್ಗ ನಗರದಲ್ಲಿ ಕುಮಾರನ್ ಕಣಿವೆ ಎಂಬ ಡಿಪ್ಲೊಮಾ ಕಾಲೇಜಿಗೆ ಸರ್ಕಾರಿ ಜಾಗದಲ್ಲಿ ಜಾಗ ಕೇಳಿದ್ದೆವು ಆದರೆ ಬೇರೆಯವರಿಗೆ ಅನಧಿಕೃತವಾಗಿ ದಾಖಲೆ ಮಾಡಿಕೊಂಡು ಕೋಟ್ಯಂತರ ರೂಪಾಯಿ ಬೆಲೆ ಬಾಳುವಂತಹ ಜಾಗಗಳನ್ನು ಕಬಳಿಕೆ ಮಾಡಿಕೊಳ್ಳುವುದಕ್ಕೆ

ಅವಕಾಶ ಮಾಡಿಕೊಡುತ್ತಾರೆ. ಸರ್ಕಾರಿ ಉದ್ದೇಶಕ್ಕೆ ಡಿಸ್ಪೋಮಾ ಕಾಲೇಜ್ ಜಾಗ ಕೇಳಿದರೆ, ರೆವಿನ್ಯೂ ಇಲಾಖೆಯವರು ಇಲ್ಲದ ಕ್ವೈರಿಗಳನ್ನು ಹಾಕಿ ಅದನ್ನು ತಡೆಹಿಡಿಯುವ ಕೆಲಸ ಮಾಡುತ್ತಾರೆ. ದಯವಿಟ್ಟು ಡಿಪ್ಲೋಮಾ ಕಾಲೇಜಿಗೆ ಅವಶ್ಯಕತೆ ಇರುವಂತಹ ಸರ್ಕಾರಿ ಜಾಗವನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ, (ಮಾನ್ಯ ಉಪ ಮುಖ್ಯಮಂತ್ರಿಯವರು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಗೌರವಾನ್ವಿತ ಶಾಸಕರು ಪ್ರಸ್ತಾಪ ಮಾಡಿದ ಅಂಶಗಳು, ಯಾವ ಖಾಸಗಿ ವ್ಯಕ್ತಿಗಳು ಈ ರೀತಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ, ಅದನ್ನು ಅವರು ನನ್ನ ಗಮನಕ್ಕೆ ತಂದರೆ, ಖಂಡಿತ ಸಂಬಂಧಪಟ್ಟವರ ಬಗ್ಗೆ ಸರಿಯಾದ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ. ಡಿಪ್ಲೋಮಾ ಕಾಲೇಜಿಗೆ ಬೇಕಾಗಿರುವಂತಹ ಭೂಮಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಖಂಡಿತ ಅವರ ಬಗ್ಗೆ ಗಮನ ಹರಿಸಿ ಆದಷ್ಟು ಬೇಗನೆ ಅವರಿಗೆ ಕೊಡಿಸುವಂತಹ ವ್ಯವಸ್ಥೆ ಮಾಡಿಸುತ್ತೇನೆ.

ಅಧ್ಯಕ್ಷರು : ಶ್ರೀ ಸೈಯದ್ ಯಾಸೀನ್‌ನವರು ಹಾಜರಿಲ್ಲ. ಶ್ರೀ ಟಿ. ಬಿ. ಜಯಚಂದ್ರರವರು ಮಾತನಾಡುವುದು.

2. ವಿಷಯ : ಕುಣಿಗಲ್ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಮೇಲೆ ಹಲ್ಲೆ ಮಾಡಿರುವ ಬಗ್ಗೆ

ಶ್ರೀ ಟಿ. ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಕುಣಿಗಲ್ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ಮೇಲೆ ನಡೆದ ಹಲ್ಲೆ ಬಗ್ಗೆ ಸರ್ಕಾರದಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ನಾನು ಇದನ್ನು ಬಹಳ ಸೂಕ್ಷ್ಮವಾಗಿ ಹೇಳುತ್ತಿದ್ದೇನೆ FIR file ಆಗಿದೆ ಅದರಲ್ಲಿ 143, 332, 344 ,353, ಇವೆಲ್ಲಾ ಸೆಕ್ಷನ್‌ಗಳು ದಾಖಲಾಗಿದ್ದರೂ ಕೂಡ, ಇದುವರೆಗೂ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕಾರಣವೇನೆಂದರೆ, ಪ್ರಭಾವಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಸದಸ್ಯರು ಎನ್ನುವ ಕಾರಣಕ್ಕೋಸ್ಕರ ಪೊಲೀಸರು ಇವತ್ತು ಇವರ ಬಗ್ಗೆ ನಿರ್ಲಿಪ್ತರಾಗಿದ್ದಾರೆ, ಎಂದರೆ, ಆಯ್ಕೆಯಾಗಿರುವಂತಹ ಜನಪ್ರತಿನಿಧಿಗಳಿಗೆ ವಿಶೇಷವಾದಂತಹ ಕಾನೂನೇ? ಜನಸಾಮಾನ್ಯರಿಗೆ ಒಂದು ಕಾನೂನೇ